ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸಾ ಶಿಬಿರಗಳು

290 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) ; ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಿಸೆಂಬರ್ 90ರಿಂದ ಜನವರಿ 1991ರವರೆಗೆ ಬೆಂಗಳೂರು ನಗರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಮತ್ತು ಸ್ವಯಂ ಪ್ರೇರಿತ ಸಂಸ್ಥೆಗಳ ವತಿಯಿಂದ ನಡೆಸಲಾದ ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸಾಶಿಬಿರಗಳೆಷ್ಟು?

ಆ) ಯಾವ ಸ್ಥಳಗಳಲ್ಲಿ ಈ ಶಿಬಿರಗಳನ್ನು ನಡೆಸಲಾಯಿತು?

ಇ) ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗಳ ಸಂಖ್ಯೆ ಎಷ್ಟು?

ಈ) ಶಸ್ತ್ರ ಚಿಕಿತ್ಸೆಗೆ ಒಳಗಾದವರಿಗೆ ಕೊಡಲಾದ ಪ್ರೇರೇಪಣಾ ಹಣದ ವಿವರಗಳು;

ಉ) 1990ನೇ ಸಾಲಿಗೆ ನಿಗದಿಪಡಿಸಲಾದ ಗುರಿ;

ಊ)ಸರ್ಕಾರವು ಈ ಗುರಿಯನ್ನು ಸಾಧಿಸಿದೆಯಾ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು) :

ಅ) ಬೆಂಗಳೂರು ನಗರದಲ್ಲಿ ಈ ಅವಧಿಯಲ್ಲಿ ಎರಡು ಶಿಬಿರಗಳನ್ನು ನಡೆಸಲಾಗಿದೆ.

ಆ) ಈ ಶಿಬಿರಗಳನ್ನು ಬೆಂಗಳೂರು ನಗರದ ಪೊಬ್ಬತ್ತಿ ಹೆರಿಗೆ ಆಸ್ಪತ್ರೆ ಮತ್ತು ದಾಸಪ್ಪ ಹೆರಿಗೆ ಆಸ್ಪತ್ರೆಗಳಲ್ಲಿ ನಡೆಸಲಾಯಿತು.

ಇ) ಪೊಬ್ಬತ್ತಿ ಹೆರಿಗೆ ಆಸ್ಪತ್ರಿಯಲ್ಲಿ 146 ಜನರಿಗೆ ಮತ್ತು ದಾಸಪ್ಪ ಹೆರಿಗೆ ಆಸ್ಪತ್ರೆಯಲ್ಲಿ 200 ಜನರಿಗೆ ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ.

ಈ) ಶಸ್ತ್ರ ಚಿಕಿತ್ಸೆಗೆ ಒಳಗಾದವರಿಗೆ ಸರ್ಕಾರದ ವತಿಯಿಂದ ರೂ. 155ನ್ನು ಮತ್ತು ಬೆಂಗಳೂರು ಮಹಾನಗರಪಾಲಿಕೆ ವತಿಯಿಂದ ರೂ.200ನ್ನು ಕೊಡಲಾಗಿದೆ. ಅಲ್ಲದೆ ಬೆಂಗಳೂರು ಲಾಯನ್ಸ್ ಕ್ಲಬ್ ವತಿಯಿಂದ ಒಂದು ಸ್ಟೀಲ್ ತಟ್ಟೆಯನ್ನು ಕೊಡಲಾಗಿದೆ.

ಉ) 1990-91ನೇ ಸಾಲಿಗೆ 25000 ಶಸ್ತ್ರ ಚಿಕಿತ್ಸೆಯ ಗುರಿ ನಿಗದಿಪಡಿಸಲಾಗಿದೆ.

ಊ) 1990-91ನೇ ಸಾಲಿನಲ್ಲಿ ಏಪ್ರಿಲ್ 90ರಿಂದ ಜನವರಿ 91ರವರೆಗೆ ಬೆಂಗಳೂರು ನಗರದಲ್ಲಿ 16779 (ಶೇಕಡ 67.1) ಶಸ್ತ್ರ ಚಿಕಿತ್ಸೆಗಳನ್ನು ಮಾಡಲಾಗಿದೆ. ಬಾಕಿ ಇರುವ ಗುರಿಯನ್ನು ವರ್ಷದ ಇನ್ನುಳಿದ ಅವಧಿಯಲ್ಲಿ ಸಾಧಿಸಲು ಪ್ರಯತ್ನ ಮಾಡಲಾಗುವುದು.

ಖಾಸಗಿ ಸಾರಿಗೆ ಮಾಲಿಕರಿಗೆ ಕೆಲವು ಆಯ್ದ ಮಾರ್ಗಗಳನ್ನು ನೀಡುವುದು.

296 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) ; ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ಸಾರಿಗೆ ಮಾಲೀಕರಿಗೆ ಕೆಲವು ಆಯ್ದ ಮಾರ್ಗಗಳನ್ನು ನೀಡಲು ಸರ್ಕಾರ ಉದ್ದೇಶಿಸಿದೆಯೆ?

ಆ) ಹಾಗಿದ್ದಲ್ಲಿ, ಯಾವ ಯಾವ ಮಾರ್ಗಗಳನ್ನು ಖಾಸಗಿಯವರಿಗೆ ನೀಡಲಾಗುವುದು;

ಇ) ಬೆಂಗಳೂರು ನಗರದ ಕೆಲವು ಮಾರ್ಗಗಳನ್ನು ಸಹ ಖಾಸಗಿಯವರಿಗೆ ನೀಡಲಾಗುತ್ತಿದೆಯೇ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಮಂಗಳೂರು ವಿಶ್ವವಿದ್ಯಾನಿಲಯದ ಪೀಠಗಳ ಬಗ್ಗೆ

1232 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಪೀಠ, ತುಳು ಪೀಠ, ಜಾನಪದ ಪೀಠಗಳು ಇವೆಯೇ?

ಆ) ಇದಲ್ಲದೆ ಬೇರೆ ಯಾವ ಯಾವ ಪೀಠಗಳಿವೆ?

ಇ) ಇಲ್ಲಿ ಇಸ್ಲಾಂ ಪೀಠ ಇದೆಯೇ?

ಈ) ಇಲ್ಲವಾದರೆ ಏಕೆ ಸ್ಥಾಪನೆ ಮಾಡಲು ಯೋಚಿಸಿಲ್ಲ?

ಉ) ಈಗ ಇರುವ ಪೀಠಗಳಿಗೆ ಸರಕಾರ ಹಣದ ನೆರವು ನೀಡಿದೆಯೇ?

ಊ) ಯಾವ ಪೀಠಕ್ಕೆ ಎಷ್ಟೆಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ(ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಈ ಕೆಳಗೆ ನಮೂದಿಸಿರುವ ಪೀಠಗಳಿವೆ.

1) ಭಾರತೀಯ ಸ್ಟೇಟ್ ಬ್ಯಾಂಕಿನ ಗ್ರಾಮೀಣ ಅಭಿವೃದ್ಧಿ ಪೀಠ.

2) ಧರ್ಮನಿಧಿಯೋಗ ಪೀಠ.

3) ಎಂ.ವಿ.ಶಾಸ್ತ್ರಿ ಸ್ಮಾರಕ ಆಯುರ್ವೇದ ಮತ್ತು ಸಂಸ್ಕೃತ ಪೀಠ.

4) ಕೆನರಾ ಬ್ಯಾಂಕಿನ ಮೇನೇಜ್‌ಮೆಂಟ್ ಕೋರ್ಸಿನ ಪೀಠ.

5) ಸಿಂಡಿಕೇಟ್ ಬ್ಯಾಂಕಿನ ರೂರಲ್ ಬ್ಯಾಂಕಿಂಗ್ ಪೀಠ.

6) ವಿಜಯಾ ಬ್ಯಾಂಕಿನ ಪರಿಸರ ಸಂರಕ್ಷಣಾ ಪೀಠ.

7) ಮಂಗಳೂರು ಡಯೊಸೆಸ್‌ನ ಕ್ರಿಶ್ಚಿಯಾನಿಟಿ ಪೀಠ.

ಇ) ಇಲ್ಲ.

ಈ) ಈ ವಿಷಯದಲ್ಲಿ ಯಾವ ಪ್ರಸ್ತಾವನೆಯು ಬಂದಿರುವುದಿಲ್ಲ.

ಉ) ಎಂ. ವಿ. ಶಾಸ್ತ್ರಿ ಸ್ಮಾರಕ ಆಯುರ್ವೇದ ಮತ್ತು ಸಂಸ್ಕೃತ ಪೀಠಕ್ಕೆ ಸರಕಾರ ರೂ. 2 ಲಕ್ಷಗಳ ನೆರವು ನೀಡಿದೆ.

ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ ಬಗ್ಗೆ

293 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿ ವಿಶೇಷ ತಪಾಸಣೆ ಅಂದರೆ ಸಿ.ಟಿ.ಸ್ಕಾನಿಂಗ್ ಲೇನಿಯರ್ ಆಕ್ಸಿಲರೇಟರ್ ಪರಮಾಣು ವೈದ್ಯಕೀಯ ತಪಾಸಣೆ ಮತ್ತು ಮೆಮೋಗ್ರಪಿ ಮುಂತಾದ ವಿಷಯಗಳಿಗೆ ಮಾಡುತ್ತಿರುವ ದರಗಳು ಯಾವುವು?

ಆ) ಮೇಲೆ ನಿಗದಿಪಡಿಸಿರುವ ದರಗಳು ಎಲ್ಲಾ ಹಂತದ ಆದಾಯದ ವರ್ಗದ ರೋಗಿಗಳಿಗೆ ಅನ್ವಯವಾಗುತ್ತದೆಯೇ?